ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ರಾಯಚೂರು
ಸಿ.ಸಿ.ನಂಬರು.380/2010.
ಸಿಡೆಬ್ಲ್ಯೂ ನಂ.4 ಪಿಡೆಬ್ಲ್ಯೂ ನಂ.4
ಪ್ರಮಾಣೀಕರಿಸಿದ ದಿನಾಂಕಃ 07-04-2014

| | |
|---|---|
| ಸಾಕ್ಷಿದಾರನ ಹೆಸರು | ಃ ನೀಲಮ್ಮಾ |
| ತಂದೆಃ ಗಂಡನ ಹೆಸರು | ಃ ಜ್ಞಾನಪ್ಪ |
| ವಯಸ್ಸು | ಃ 32ವರ್ಷ |
| ಉದ್ಯೋಗ | ಃ ಸೇಂಗಾ ವ್ಯಾಪಾರ |
| ವಿಳಾಸ | ಃ ರಾಯಚೂರು. |
| ಮುಖ್ಯ ವಿಚಾರಣೆ | ಃ ಹಿರಿಯ ಸ.ಸ.ಅ.ಅವರಿಂದ |

ನನಗೆ ನ್ಯಾಯಾಲಯದ ಮುಂದಿರುವ ಆರೋಪಿಗಳ ಪರಿಚಯ ಇದೆ. ನನಗೆ ಸುಲೋಚನಾಳ ಪರಿಚಯ ಇದೆ. ನನಗೆ ಪಿರ್ಯಾದಿದಾರರ ಪರಿಚಯ ಇದೆ. ಅವರು ಐದು ವರ್ಷಗಳ ಹಿಂದೇ ಚೀಟಿ ವ್ಯೆವಹಾರ ಮಾಡುತ್ತಿದ್ದರು. ನಾನು ಅವರ ಬಳಿ ಎರಡು ಚೀಟಿ ಹಾಕಿದ್ದೆ. 60 ಜನಾ ಸದಸ್ಯರು ಇದ್ದೇವು. ಒಬ್ಬರು ಪ್ರತಿ ತಿಂಗಳು 5,000/- ರೂ. 1ನೇ ಆರೋಪಿ ಮನೆಯಲ್ಲಿ ಪ್ರತಿ ತಿಂಗಳ 10ನೇ ತಾರಿಕು ಚೀಟಿ ನಡೆಯುತಿತ್ತು. ಸುಮಾರು 03 ತಿಂಗಳು ಚೀಟಿ ಕಟ್ಟಿದ್ದೇನೆ. 1 ಮತ್ತು 2ನೇ ಆರೋಪಿಗಳು ಹಣ ಸಂಗ್ರಹಿಸುತ್ತಿದ್ದರು. 5,000/- ಕ್ಕೆ 10,000/- ರೂ. ಕೊಡುವುದಾಗಿ ಹೇಳಿದ್ದರು. ನನಗೆ 25,000/- ರೂ. ಬರಬೇಕಾಗಿದೆ. ನಂತರ ಆರೋಪಿಗಳ ಮನೆಬಳಿ ಹೋದಾಗ ಅವರು ಸಿಗಲಿಲ್ಲ ಆದುದ್ದರಿಂದ ಪಿರ್ಯಾದಿದಾರರು ಪೋಲಿಸರಿಗೆ ದೂರು ಕೊಟ್ಟಿದ್ದಾರೆ. ಪೋಲಿಸರು ತನಿಖೆ ಮಾಡಿ ನನ್ನ ಹೇಳಿಕೆ ಪಡೆದಿದ್ದಾರೆ. ದೂರು ಕೊಟ್ಟ ನಂತರ ಆರೋಪಿಗಳು ಸಿಕ್ಕಿದ್ದರು. ಆರೋಪಿಗಳು ನನಗೆ ಐದು ರಶೀದಿಗಳು ಕೊಟ್ಟಿದ್ದು ಅವುಗಳಲ್ಲಿ ನಾಲ್ಕು ರಶೀದಿಗಳನ್ನು ನ್ಯಾಯಾಲಯದ ಮುಂದೆ ನೋಡುತಿದ್ದು ಅವುಗಳನ್ನು ನಿಪಿ.10 ರಿಂದ 13 ಎಂದು ಗುರುತಿಸಲಾಯಿತು.

ಪಾಟೀಸವಾಲುಃ1 ರಿಂದ 3ನೇ ಆರೋಪಿಪರ ಶ್ರೀ ಎಮ್. ಎಸ್. ಹೆಚ್. ವಕೀಲರಿಂದಃ-

ಪೋಸ್ಟ ಆಫೀಸ್‌ನಿನಲ್ಲಿ ಆರ್.ಡಿ. ಖಾತೆಗಳು ಇರುತ್ತವೆ. ಸ್ವಲ್ಪ ದಿನ ಕಟ್ಟಿದ ಬಗ್ಗೆ ಹಣ ವಾಪಸು ಕೊಟ್ಟಿದ್ದಾರೆ. ಆ ಖಾತೇಗಳನ್ನು ಮುಚ್ಚಲಾಗಿದೆ. ಅಗ್ರಿಗೋಲ್ಡ್ ಮತ್ತು ಆರ್ ಡಿ. ಇಂದ ಕಟ್ಟಿದ್ದಷ್ಟು ಹಣವನ್ನು ವಾಪಸು ಪಡೆದಿದ್ದೇನೆ. ಬೇರೆ ಚೀಟಿ ವ್ಯೆವಹಾರಗವನ್ನು ಆರೋಪಿಗಳು ಮಾಡುತ್ತಿದ್ದರು.

ಆರೋಪಿಗಳು ಚೀಟಿ ನಡೆಸುವ ಬಗ್ಗೆ ಕಂಪನಿಯನ್ನು ನೋಂದಾಯಿಸಿರಲಿಲ್ಲ. ರಶೀದಿಗಳನ್ನು ಪೊಲಿಸರಿಗೆ ನಾವೇ ಕೊಟ್ಟಿದ್ದೇವೆ. ನನಗೆ ರಶೀದಿಗಳನ್ನು ಓದಲು ಬರುವುದಿಲ್ಲ. ಅವುಗಳನ್ನು 1 ಮತ್ತು 2ನೇ ಆರೋಪಿಗಳು ಕೊಟ್ಟಿದ್ದಾರೆ. ಅವುಗಳಲ್ಲಿ ನನ್ನ ಸಹಿಗಳು ಇರುವುದಿಲ್ಲ. ಆರೋಪಿಗಳು ಸಹಿ ಮಾಡಿರುವ ರಶೀದಿಗಳನ್ನು ಹಾಜರಪಡಿಸಿದ್ದೇನೆ. ಮನೆಯಲ್ಲಿ ಚೀಟಿ ನಡೆಸುತ್ತಿದ್ದರು. ನಾನು ಹೇಳಿದಂತೆ ಆರೋಪಿಗಳು ಯಾವುದೇ ಚೀಟಿ ನಡೆಸಿಲ್ಲ ಎಂದರೆ ಸರಿಯಲ್ಲ. ಯಾವುದೇ ರಶೀದಿಗಳನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ರಶೀದಿಗಳನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ದೂರು ಕೊಟ್ಟ ನಂತರ ನಾನು ಪೋಲಿಸರಿಗೆ ಬೇರೆ ಹೇಳಿಕೆ ಕೊಟ್ಟಿಲ್ಲ. ಸುಳ್ಳು ದಾಖಲೇಗಳು ಸೃಷ್ಟಿಸಿ ಆರೋಪಿಗಳ ವಿರುದ್ಧ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀಸವಾಲುಃ4ನೇ ಆರೋಪಿಪರ ಶ್ರೀ ಆರ್ ಕೆ. ವಕೀಲರಿಂದಃ–

ನಾನು ದೂರುಕೊಡಲು ಹೋದ ದಿನಾ 4ನೇ ಆರೋಪಿತಳು ಬಂದಿದ್ದಳು. ಆಕೇಯು ಕೂಡಾ ನಾಲ್ಕು ಚೀಟಿಗಳು ಹಾಕಿದ್ದಾಳೆ. 4ನೇ ಆರೋಪಿ ನನ್ನಿಂದ ಯಾವುದೇ ಹಣ ಪಡೆದಿಲ್ಲ ಮತ್ತು ಯಾವುದೇ ರಶೀದಿ ಕೊಟ್ಟಿಲ್ಲ. ನನಗೊ ಮತ್ತು 4ನೇ ಆರೋಪಿಯೊಂದಿಗೆ ಯಾವುದೇ ಹಣದ ವ್ಯೆವಹಾರ ಇಲ್ಲ. ನಾನು 4ನೇ ಆರೋಪಿ ವಿರುದ್ಧ ದೂರು ಕೊಟ್ಟಿಲ್ಲ. 4ನೇ ಆರೋಪಿ ವಿರುದ್ಧ ಯಾವುದೇ ಮರು ಹೇಳಿಕೆ ಕೊಟ್ಟಿಲ್ಲ. 4ನೇ ಆರೋಪಿಯು ಸಹಾ ಮೋಸ ಹೋಗಿದ್ದಾಳೆ ಎಂದರೆ ಸರಿ. 4ನೇ ಆರೋಪಿ ಸಹಾ ಪ್ರತಿ ತಿಂಗಳು ಚೀಟಿ ಕಟ್ಟುತಿದ್ದಳು. ಬಸಮ್ಮಾ ಮತ್ತು ಮಹೇಶ್ವರಿ ವಿರುದ್ಧ ಮಾತ್ರ ದೂರು ಕೊಟ್ಟಿದ್ದೇನೆ. 4ನೇ ಆರೋಪಿ ನನಗೆ ಯಾವುದೇ ಹಣ ಕೊಡಬೇಕಾಗಿಲ್ಲ. ರಶೀದಿಗಳ ಮೇಲೆ 4ನೇ ಆರೋಪಿ ಸಹಿಗಳು ಇಲ್ಲ ಎಂದರೆ ಸರಿ. ಯಾವುದೇ ಚೀಟಿಗಳನ್ನು 4ನೇ ಆರೋಪಿ ನಡೆಸುತ್ತಿರಲಿಲ್ಲಾ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನೆ ಮೇರೆಗೆ ಬೆರಳಚ್ಚುಗಾರರು ಬೆರಳಚ್ಚು ಮಾಡಿರುತ್ತಾರೆ ಮತ್ತು ಅದನ್ನು ಸಾಕ್ಷಿಗೆ ಓದಿ ತಿಳಿಸಿ ಹೇಳಿದಾಗ ಸಾಕ್ಷಿ ಸರಿ ಇದೆ ಅಂತಾ ಒಪ್ಪಿಕೊಂಡಿರುತ್ತಾರೆ.)

ಮುಖ್ಯ ನ್ಯಾಯಿಕ ದಂಡಾಧಿಕಾರಿ, ರಾಯಚೂರು.